# ಕೃಷಿ ವಿಶ್ವವಿದ್ಯಾಲಯ, ಧಾರವಾಡ
## ಕೃಷಿ ವಿಜ್ಞಾನ ಕೇಂದ್ರ, ಇಂಡಿ

ದಿನಾಂಕ: 12.03.2022

**ಪ್ರಕಟಣೆಯ ಕೃಪೆಗಾಗಿ**

ದಿನಾಂಕ 12.03.2022 ಕೃಷಿ ವಿಜ್ಞಾನ ಕೇಂದ್ರ, ಇಂಡಿ ಹಾಗೂ ಕರ್ನಾಟಕ ರಾಜ್ಯ ಅಂಬೆ ಅಭಿವೃದ್ಧಿ ಮಂಡಳ, ಇಂಡಿ ಇವರ ಸಹಯೋಗದೊಂದಿಗೆ ಸಿಂದಗಿ ಪಟ್ಟಣದ ಡಾ॥ ಬಿ. ಆರ್. ಅಂಬೇಡ್ಕರ ಭವನದಲ್ಲಿ ಬೆಳಗ್ಗೆ 10.30 ಘಂಟೆಗೆ "ಅಂಬೆ ಬೆಳೆಯ ಸಮಗ್ರ ಬೇಸಾಯ ಕ್ರಮಗಳು ಹಾಗೂ ಮೌಲ್ಯವರ್ಧನೆ ಕುರಿತು ಒಂದು ದಿವಸದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮವನ್ನು ಸಿಂದಗಿ ತಾಲೂಕಿನ ಜನಪ್ರಿಯ ಶಾಸಕರಾದ ಶ್ರೀಯುತ ರಮೇಶ ಭೂಸನೂರ ಸಾಹೇಬರು ಉದ್ಘಾಟಿಸಿ ಅಂಬೆ ಬೆಳೆಯ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ರೈತರಿಗೆ ಮಾಹಿತಿ ಒದಗಿಸುವುದು ಬಹಳ ಅವಶ್ಯಕವಾಗಿದ್ದು ಇಂದು ಆಯೋಜಿಸಿರುವ ಈ ತರಬೇತಿಯ ಸಂಪೂರ್ಣ ಲಾಭವನ್ನು ಪಡೆಯುವಂತೆ ರೈತರಿಗೆ ತಿಳಿಸಿದರು. ಕರ್ನಾಟಕ ರಾಜ್ಯ ಅಂಬೆ ಅಭಿವೃದ್ಧಿ ಮಂಡಳ, ಇಂಡಿಯ ಅಧ್ಯಕ್ಷರಾದ ಶ್ರೀಯುತ ಅಶೋಕ ಅಲ್ಲಾಪುರ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತಮಾಡುತ್ತಾ ಅಂಬೆ ವಸ್ತು ಸ್ಥಿತಿ ಮತ್ತು ಅಂಬೆ ಅಭಿವೃದ್ಧಿ ಮಂಡಳಿಯಿಂದ ಅಂಬೆ ಬೆಳೆಗಾರರಿಗೆ ದೊರೆಯುವ ಸೌಲಭ್ಯಗಳ ಕುರಿತು ವಿವರಿಸಿದರು. ಡಾ. ಆರ್. ಬಿ. ಬೆಳ್ಳಿ, ಸಹ ವಿಸ್ತರಣಾ ನಿರ್ದೇಶಕರು, ಕೃ.ವಿ.ಶಿ.ಕೆ. ಪ್ರಾ.ಕೃ.ಸಂ.ಕೇ, ವಿಜಯಪುರ ಇವರು ಮಾತನಾಡುತ್ತಾ ಇಂಡಿಯ ಅಂಬೆಯ ಬೆಳೆಗೆ ಬಹಳ ಪ್ರಸಿದ್ಧವಾಗಿದ್ದು ಮತ್ತು ಈ ಬೆಳೆಯನ್ನು ಭೌಗೋಳಿಕ ಟ್ಯಾಗ ಪಡೆಯುವ ಕೆಲಸ ಪ್ರಗತಿಯಲ್ಲಿದ್ದು ಶ್ರೀಘ್ರದಲ್ಲಿ ಇದನ್ನು ಪಡೆಯುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಡಾ. ಎ.ಎನ್. ಬಗಲಿ, ನಿವೃತ್ತ ಪ್ರಾಧ್ಯಾಪಕರು (ತೋಟಗಾರಿಕೆ) ತಜ್ಞರು, ಕೃಷಿ ಮಹಾವಿದ್ಯಾಲಯ, ವಿಜಯಪುರ ಇವರು ಅಂಬೆ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಬಗ್ಗೆ ವಿವರಿಸಿದರು ಮತ್ತು ರೈತರ ಪ್ರಶ್ನೆಗಳಿಗೆ ಉತ್ತರಿಸಿದರು. ಡಾ. ಕಾಶಿಬಾಯಿ ಖ್ಯಾಡಗಿ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಆಹಾರ ಮತ್ತು ಪೋಷಣೆ ವಿಭಾಗ, ಕೃಷಿ ಮಹಾವಿದ್ಯಾಲಯ, ವಿಜಯಪುರ ಇವರು ತಾಂತ್ರಿಕೆ ಗೋಷ್ಠಿಯಲ್ಲಿ ಅಂಬೆ ಬೆಳೆಯುವ ಮೌಲ್ಯವರ್ಧನೆ ಕುರಿತು ವಿವರವಾಗಿ ಮಾತನಾಡಿದರು. ಶ್ರೀ. ರವಿ ಪೂಜಾರಿ ಇವರು ಮಾತನಾಡುತ್ತಾ ಒಂದು ಜಿಲ್ಲೆ ಒಂದು ಬೆಳೆ ಯೋಜನೆ ಅಡಿಯಲ್ಲಿ ಅಂಬೆ ಬೆಳೆ ವಿಜಯಪುರ ಜಿಲ್ಲೆ ಆಯ್ಕೆಯಾಗಿದ್ದು ಇದರಲ್ಲಿ ಸಿಗುವ ಅನುಕೂಲತೆಗಳ ಬಗ್ಗೆ ತಿಳಿಸಿದರು. ಪ್ರಗತಿ ಪರ ರೈತರಾದ ಶ್ರೀ. ಎಸ್. ಟಿ. ಪಾಟೀಲ್, ಸದರಿ ಕಾರ್ಯಕ್ರಮದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದರು. ಶ್ರೀಯುತ ಮಹಾದೇವ ಅಂಬಲಿ, ಒಂದು ಬೆಳೆ ಒಂದು ಜಿಲ್ಲೆ, ವಿಜಯಪುರ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಇವರು ಸಹ ಮಾತನಾಡಿ ಈ ಯೋಜನೆ ಅಡಿಯಲ್ಲಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ವಿವರಿಸಿದರು. ಶ್ರೀಯುತ ರಾಘವೇಂದ್ರ ಬಗಲಿ, ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಸಿಂದಗಿ ಇವರು ಕಾರ್ಯಕಮವನ್ನು ನಿರೂಪಿಸಿದರು. ಡಾ. ಆರ್.ಬಿ. ನೇಗಳೂರ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಇಂಡಿ ಇವರು ಎಲ್ಲರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಡಾ. ಸಂತೋಷ ಸಪ್ಪಂಡಿ, ವ್ಯವಸ್ಥಾಪಕರ ನಿರ್ದೇಶಕರು, ಕರ್ನಾಟಕ ರಾಜ್ಯ ಅಂಬೆ ಅಭಿವೃದ್ಧಿ ಮಂಡಳ, ಇಂಡಿ ಇವರು ಎಲ್ಲರನ್ನು ವಂದಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಅಂಬೆ ಅಭಿವೃದ್ಧಿ ಮಂಡಳ, ಇಂಡಿ, ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ. ಆನಂದ ಬಿರಾದಾರ ಮತ್ತು ತೋಟಗಾರಿಕೆ ಇಲಾಖೆ, ಸಿಂದಗಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಮತ್ತು ಅವರ ಸಿಬ್ಬಂದಿ ವರ್ಗದವರು ಹಾಜರಿದ್ದರು. ಸದರಿ ಕಾರ್ಯಕ್ರಮವು ಸಂಜೆ 4.30 ಘಂಟೆಯವರೆಗೆ ಜರುಗಿತು. ಈ ಕಾರ್ಯಕ್ರಮದಲ್ಲಿ 300 ಕ್ಕೂ ಹೆಚ್ಚು ಅಂಬೆ ಬೆಳೆಗಾರರು ಇದರ ಸದುಪಯೋಗ ಪಡೆದುಕೊಂಡರು.

ಹಿರಿಯ ವಿಜ್ಞಾನಿ ಮತ್ತು ಮುಖ್ಯಸರು,

ಕೃಷಿ ವಿಜ್ಞಾನ ಕೇಂದ್ರ, ಇಂಡಿ

ಮಾನ್ಯರೆ,

ಈ ಮೇಲ್ಕಂಡ ವಿಷಯವನ್ನು ಸುದ್ದಿಯಾಗಿತಮ್ಮಜನಪ್ರಿಯ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಈ ಮೂಲಕ ಕೋರಲಾಗಿದೆ.